**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು.**

ಅಪರಾಧಿಕ ಪ್ರಕರಣ ಸಂ.**1474/2025**

ಫಿರ್ಯಾದುದಾರರು : ನಗರ ಆರಕ್ಷಕ ಠಾಣೆ, ಮುಳಬಾಗಿಲು.

-ವಿರುದ್ಧ-

ಆರೋಪಿ : ಸೈಯದ್ ಅಪ್ಸರ್ @
ಮಹಮ್ಮದ್ ಆರೀಫ್ @
ಸೈಯದ್ ಅಸ್ಗರ್ @
ಸಸೈಯದ್ ಪಾಷ @ ತೋತ, 37 ವರ್ಷ,
ಬಿನ್ಃ ಸೈಯದ್ ಅಹ್ಮದ್,
ವಾಸಃ ನಂ.31/50 ಕೊತ್ತಿಂಡ್ಲು,
ಪುಂಗನೂರು ತಾಲೂಕು,
ಚಿತ್ತೂರು ಜಿಲ್ಲೆ.

ಹಾಲಿ ವಾಸಃ
ಬಾಲಾಜಿ ಕಾಲೋನಿ,
ಮದನಪಲ್ಲಿ ರಸ್ತೆ,
ಪುಂಗನೂರು ನಗರ/ತಾಲೂಕು,
ಚಿತ್ತೂರು ಜಿಲ್ಲೆ.

## ದೋಷಾರೋಪಣೆ

ಮುಳಬಾಗಿಲಿನ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ಶ್ರೀ **ಹರೀಶ್ ಜಿ.,** ಎಂ.ಬಿ.ಎ.,ಎಲ್ ಎಲ್.ಬಿ., ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮಗಳ ವಿರುದ್ಧ ಈ ಕೆಳಕಂಡ ದೋಷಾರೋಪಣೆ ಹೊರಿಸುತ್ತೇನೆ.

ದಿನಾಂಕಃ06.05.2024 ರಂದು ಮಧ್ಯ ರಾತ್ರಿ (ಬೆಳಗಿನ ಜಾವ) ಸುಮಾರು 2.00 ಗಂಟೆಯ ಸಮಯದಲ್ಲಿ ಆರೋಪಿಯಾದ ನೀವು ಮುಳಬಾಗಿಲು ನಗರದ ಮಂಜುನಾಥ ಕಾಲೋನಿಯಲ್ಲಿರುವ ಸಾಕ್ಷಿ-1 ರವರ ಮನೆ ಬಳಿ ಹೋಗಿ, ಮನೆಯ ಬಾಗಿಲಿನ ಬೀಗವನ್ನು ರಾಡಿನಿಂದ ಹೊಡೆದು ಕಳವು ಮಾಡುವ ಉದ್ದೇಶದಿಂದ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಆ ಕಾರಣದಿಂದ ನೀವು

ಭಾರತೀಯ ದಂಡ ಸಂಹಿತೆ ಕಲಂ-**457** ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರ ಮನೆಯ ಲಾಕರಿನಲ್ಲಿಟ್ಟಿದ್ದ ಒಂದು ಬಂಗಾರದ ಕೈ ಬಳೆ, ಮತ್ತೊಂದು ಬಂಗಾರದ ಕೈ ಬಳೆ, ಒಂದು ಬಂಗಾರದ ಕಪ್ಪು ಮಣಿ ಕತ್ತಿನ ಚೈನ್ ಮತ್ತು ಪದಕ, ಒಂದು ಬಂಗಾರದ ಕತ್ತಿನ ಚೈನ್, ಒಂದು ಬಂಗಾರದ ಬಿಳಿ ಹರಳುಗಳಿರುವ ಪಾಪಡಿ ಬೊಟ್ಟು, ಬಂಗಾರದ ಮಾದರಿಯ 7 ಉಂಗುರಗಳು ಆಗಿದ್ದು, ಇವುಗಳ ಒಟ್ಟು ತೂಕ 99.88 ಗ್ರಾಂ ಆಗಿದ್ದು, ಒಟ್ಟು ಅಂದಾಜು ಬೆಲೆ ರೂ.8,,99,820/- ಆಗಿದ್ದು ಹಾಗೂ ರೂ.40,000/- ಹಣವನ್ನು ಕಳವು ಮಾಡಿಕೊಂಡು ಹೋಗಿರುತ್ತೀರಿ. ಆ ಕಾರಣದಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ-**380** ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಈಗಾಗಲೇ ಆಸ್ತಿ ಅಥವಾ ಹಣಕ್ಕೆ ಸಂಬಂಧಿಸಿದ ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದರೂ ಸಹ, ಪದೇ ಪದೇ ಗಂಭೀರ ಅಪರಾಧಗಳನ್ನು ಮಾಡಿ, ಮತ್ತೆ ಅದೇ ರೀತಿಯ ಅಪರಾಧಗಳನ್ನು ಮಾಡಿರುತ್ತೀರಿ. ಆ ಕಾರಣದಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ-**75** ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ಪ್ರಶ್ನೆ-1: ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರಃ

ಪ್ರಶ್ನೆ.2: ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ಆತ ಕೊಟ್ಟ ಉತ್ತರಗಳನ್ನು ಸ್ವತಃ ನಾನೇ ಬರೆದುಕೊಂಡಿರುವುದಾಗಿ ದೃಢೀಕರಿಸುತ್ತೇನೆ.

ದಿನಾಂಕಃ **27.05.2026.**

(**ಹರೀಶ್ ಜಿ**.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಮುಳಬಾಗಿಲು.